ಲಗ್ಗೆ ಹಾಕುವ ಅಭ್ಯಾಸದಿಂದ ಮಾವಯ್ಯ ಹೆಂಗಸರ ತಿನ್ನುವ ಬಾಯಿಗೆ ಬಾಯ್ ಕುಕ್ಕೆ ಹಾಕುತ್ತಿದ್ದ.

ಉದಕ ಮಾವಯ್ಯ ಒಬ್ಬ ವ್ಯವಸಾಯಗಾರನಾಗಿ ಕಾಲಕಾಲಕ್ಕೆ ಮಾಡಬೇಕಾದ ಕೆಲಸಗಳನ್ನು ಮರೆತು ಬಾಡಿನ ಆಸೆಗೆ ಬಿದ್ದು, 'ಬೆದೆ ಬಂದಾಗ ಬಿತ್ತದೆ, ಹದ ಬಂದಾಗ ಹರಗದೆ', 'ಬಿತ್ತೊವಾಗ ಬೇಲೂರಿಗೆ ಹರಗುವಾಗ ಆಲೂರಿಗೆ' ಹೋಗಿಬಿಡುತ್ತಿದ್ದ. ಹೆಂಡತಿ ಮೆಣಸಕ್ಕ ನೆರೆಯವರನ್ನ ಗೋಗರೆದು ಬೀಜ ಬಿತ್ತಿ ಬೆಳೆ ತೆಗೆಯುತ್ತಿದ್ದಳು. ಎಷ್ಟೊ ಸಲ ಅವಳೇ ಹೊಲ ಉಳುತ್ತಿದ್ದಳು. ಇಷ್ಟೆಲ್ಲಾ ಆಗಿ ಬೆಳೆ ಕೈಗೆ ಬಂದರೂ ಮಾವಯ್ಯ ಒಂದು ಹುಲ್ಲುಕಡ್ಡಿಯನ್ನೂ ಎತ್ತಿಡಲಾರ. ಅಂದಿನ ಹಳ್ಳಿಗಳ ಕಟ್ಟುನಿಟ್ಟಿನ ಅನುಸಾರ ಯಾರಿಗಾದರೂ ಬೆಂಕಿ, ಬಿಸಿನೀರು ಕೊಡಬಾರದು ಎಂದು ಕಟ್ಟು ಮಾಡಿದ್ದರೂ ಮಾವಯ್ಯ ಊರ ಕಟ್ಟನ್ನೇ ಧಿಕ್ಕರಿಸಿ, ಅಗತ್ಯವಾಗಿ ಕಟ್ಟಿಗೆ ಒಳಗಾಗಿದ್ದ ಮನೆಯ ಬಾಡಿನೆಸರಿಗೆ ಹಾಜರಾಗುತ್ತಿದ್ದ. ಈ ಪರಿಯ ಮಾಂಸದ ಲೋಭ!

ಮಾವಯ್ಯನ ಮಿತಿ ಮೀರಿದ ಬಾಡಿನೆಸರಿನ ಪ್ರೀತಿ ಒಂದು ರಾತ್ರಿ ತಿಮ್ಮಿಯ ಮನೆ ಬಾಗಿಲಿಗೆ ಅವನನ್ನು ಮುಟ್ಟಿಸಿತು. ಕಾರಣಾಂತರ ಊರವರು ಅವಳ ಮನೆಯಲ್ಲಿ ಬಳಗ ಭೋಜನ ಮಾಡಕೂಡದು ಎಂದು ಕಟ್ಟು ಮಾಡಿದ್ದರು. ತಿಮ್ಮಿ ಮನೆಯ ಕೋಳಿ 'ಕರ್ರ್' ಎಂದು ಕೂಗಿದ ಶಬ್ದ ಕೇಳಿ, ಬಾಡಿನೆಸರನ್ನು ಊಹಿಸಿದ ಉದಕ ಮಾವಯ್ಯ ಆ ರಾತ್ರಿ ತನ್ನ ಗಿರಕಿ ಚಡಾವನ್ನು ತೆಗೆದಿಟ್ಟು ತಿಮ್ಮಿ ಮನೆಗೆ ಚಿತ್ತೈಸಿದ.

ಒಬ್ಬಳೇ ಇದ್ದು ಬೇಸರಗೊಂಡಿದ್ದ ತಿಮ್ಮಿ ಮಾವಯ್ಯನನ್ನು ಸ್ವಾಗತಿಸಿದಳು. ಇದೆಲ್ಲವನ್ನು ಗಮನಿಸುತ್ತಿದ್ದ ಎದುರು ಮನೆ ಗುಮಾನಿ ಪಂಚಾಯ್ತಿಗೆ ದೂರು ಕೊಟ್ಟ. ಬೇರೆಯವರು ಇರಲಿ, ಹೆಂಡತಿ ಮೆಣಸಕ್ಕನೂ ಅವನ ರಕ್ಷಣೆಗೆ ಬರಲಿಲ್ಲ. ಮಾಂಸವಿಲ್ಲದ ಬರಿ ಸಾರು ಉಂಡು ಅವಳಿಗೂ ಸಾಕಷ್ಟು ಬೇಜಾರಾಗಿತ್ತು. ಬಾಡಿನೆಸರಿನ ದೆಸೆಯಿಂದ 100 ರೂಪಾಯಿ ದಂಡ ಬಿತ್ತು.

ಒಂದು ಕಾಲದ ಹಳ್ಳಿಗಳ ಜನ ಜೀವನದಲ್ಲಿ ಊರೊಟ್ಟಿನ ಎಲ್ಲ ಕಾರ್ಯಗಳಲ್ಲಿ ಎಲ್ಲರೂ ಭಾಗವಹಿಸಬೇಕಿತ್ತು. ಮಾವಯ್ಯ ಮಾತ್ರ ಈ ಕಡೆ ಕಡ್ಡಿ ಆ ಕಡೆ ಇಡುತ್ತಿರಲಿಲ್ಲ. ತೆಂಗಿನಮರಗಳ ಆ ಊರಿನಲ್ಲಿ ಯಾರಾದರೂ ಕೊಬ್ಬರಿ ಸುಲಿಯುವ ಹಾರೆಯನ್ನು ಮಾವಯ್ಯನಿಂದ ಎರವಲು ಪಡೆದರೆ, ಮಾವಯ್ಯ ಅವರ ಹಿಂದೆಯೇ ಹೋಗಿ ಮುಗ್ಗಲು ಕೊಬ್ಬರಿಯನ್ನು ಆರಿಸುವ ನೆಪದಲ್ಲಿ ಒಂದೆರಡು ಕೊಬ್ಬರಿ ತಿಂದು ಮುಗಿಸುತ್ತಿದ್ದ. ಮದುವೆ ಮನೆ ಅಡುಗೆ ತಯಾರಿಯಲ್ಲಿ ನೆನಸಿದ ಅಕ್ಕಿಯನ್ನೇ ಮುಕ್ಕುತ್ತಿದ್ದ. ಮಾವಯ್ಯನ ಈ ಚಾಲು ನೋಡಿ ಊರ ಜನ ಬುದ್ಧಿ ಕಲಿಸಲು ಕಾಯುತ್ತಿದ್ದರು. ಮಾವಯ್ಯನ ಮಗಳ ಮದುವೆ ಸಂದರ್ಭದಲ್ಲಿ ಊರ ಜನ ಮದುವೆ ಅಡುಗೆ ಮಾಡಬೇಕಿತ್ತು. ಮದುವೆ ದಿನ ಧಾರೆಗೆ ಗಂಡು ಬರುವ ಸೂಚನೆಯಾಗಿ ತಿಟ್ಟಿನ ಮೇಲಿಂದ ಕೊಂಬು, ಕಹಳೆ ಕೇಳತೊಡಗಿತು. ಗಾಬರಿಯಿಂದ ಮಾವಯ್ಯ ಅಡುಗೆ ಮನೆಗೆ ಬಂದು ನೋಡುತ್ತಾನೆ! ಅಡುಗೆಯ ಸೂಚನೆ ಇಲ್ಲ! ಎಲ್ಲರೂ ಒಂದು 'ದಂ' ಎಳೆದು ಬೀಡಿ ಹೊಗೆ ಬಿಟ್ಟರು! ಇದ್ಯಾಕ್ರಯ್ಯ ಎಂದರೆ ಮತ್ತೊಂದು 'ದಂ' ಹೊಗೆ! ಮಾವಯ್ಯನಿಗೆ ಇವರು ತನಗೆ ಮುಯ್ಯಿ ತೀರಿಸುತ್ತಿದ್ದಾರೆ ಎಂದು ಅರ್ಥವಾಗಿ ಊರ ಜನರಿಗೆ ತನ್ನ ಸುಲಿಪಲ್ಲು ಕಿರಿಯುತ್ತ ದಮ್ಮಯ್ಯ ಗುಡ್ಡೆ ಹಾಕಿದ ಮೇಲೆ ಊರ ಜನ ಅಡುಗೆಗೆ ಕೈ ಹಾಕಿದರು. ಇಷ್ಟಾದರೂ ಮಾವಯ್ಯನಿಗೆ ಬುದ್ಧಿ ಬರಲಿಲ್ಲ. ಬಾಡೂಟಕ್ಕಾಗಿ ಮನೆ ಮನೆ, ಊರೂರು ಅಲೆದು ಕೊನೆಗೆ ಹೊಟ್ಟೆ ಕಳತದಿಂದ ಮೃತನಾದ.

ಮಹಾಲಯ ಅಮಾವಾಸ್ಯೆಯನ್ನು ನಮ್ಮ ಗ್ರಾಮೀಣ ಜನತೆ ಗತಿಸಿದ ತಮ್ಮ ಹಿರಿಯರನ್ನು ನೆನೆಯುವ ಸಂದರ್ಭವಾಗಿ ಪರಿಗಣಿಸಿ ಗತಿಸಿದ ಹಿರಿಯರಿಗೆ ಇಷ್ಟವಾದ ತಿಂಡಿ ತೀರ್ಥ, ಭೋಜನವನ್ನು ಎಡೆ ಹಾಕಿ, ಧೂಪ ಹಾಕುತ್ತಾರೆ. ಲೇಖಕರು ಹೇಳುತ್ತಾರೆ, ಮೆಣಸಕ್ಕ ಮಹಾಲಯದ ದಿನ ಮಾಂಸದ ಅಡುಗೆಯನ್ನೇ ಎಡೆ ಹಾಕುತ್ತಾಳಂತೆ. ಮಾಂಸದೂಟ ಇಡದಿದ್ದರೆ ಮಾವಯ್ಯನೆಲ್ಲಿ ಬಂದು ಬಿಡುತ್ತಾನೊ ಎಂಬ ಭಯವಂತೆ ಉದಕ ಮಾವಯ್ಯನ ಹೆಂಡತಿ ಮೆಣಸಕ್ಕನಿಗೆ! ಆದರೆ ಉದಕ ಮಾವಯ್ಯ ಎಲ್ಲಿಗೂ ಹೋಗಿಲ್ಲ. ಇಂದು ಧಂ ಬಿರಿಯಾನಿ, ಪಾನಿಪೂರಿ, ಗೋಬಿ ಮಂಚೂರಿ ಇತ್ಯಾದಿ ಭಕ್ಷ್ಯ ಭೋಜ್ಯಗಳನ್ನು ತಿನ್ನುವವರ ರೂಪದಲ್ಲಿ ರಾರಾಜಿಸುತ್ತಿದ್ದಾನೆ.

●